ಸಮಾಧಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 204] ಸೋಮವಾರ 19—7—48 [[ಬಿಡಿ ಪ್ರತಿ 3 ಪೈ

ಮೈಸೂರು ಸಂಸ್ಥಾನದ ರೈಲ್ವೆ ಕಾರ್ಮಿಕರ
ಮಹಾ ಮುಷ್ಕರ ಪ್ರಾರಂಭವೆ ?

ಸುದ್ದಿಗಳು

ಬರ್ಲಿನ್ ಜು 17—ಸದ್ಯದಲ್ಲಿ ಮತ್ತೊಂದು ಪ್ರಪಂಚ ಯುದ್ಧವು ನಡೆಯುವುದಿಲ್ಲವೆಂದು ಜರ್ಮನಿ ಜನರಿಗೆ ರಷ್ಯಾ ಪತ್ರಿಕೆ ಭರವಸೆ ಇತ್ತಿದೆ.

ಲಂಡನ್ ಜೂ 16—ಆಟಂ ಯುದ್ಧವು ವಿಪರೀತ ಖರ್ಚಿನದೆಂದೂ ಹೆಚ್ಚು ಕಾಲ ನಡೆಯತಕ್ಕದ್ದೆಂದೂ ಬ್ರಿಟಿಷ್ ರಸಾಯನ ಶಾಸ್ತ್ರಜ್ಞರ ಅಭಿಮತ.

ಲಂಡನ್ ಜೂ 16—ಭಾರತ ಒಲಿಂಪಿಕ್ ಫುಟ್‌ಬಾಲ್ ಟೀಮಿನವರು, ಸರ್ರೇಯಲ್ಲಿ ಮೆಟ್ರೋ ಪಾಲಿಟನ್ ಪೋಲೀಸು ಟೀಮಿನ ಮೇಲೆ 3 ಗೋಲು ಹೊಡೆದು ವಿಜಯ ಸಡಿಸಿದರು.

ಮುಜಫರ್ ಪುರ ಜು 16—ಕೋರ್ಟಿನಲ್ಲಿ ಕಡಲೇಕಾಯಿ ತಿನ್ನುತ್ತಿದ್ದ ಒಬ್ಬನಿಗೆ ಕೋರ್ಟಿಗೆ ಅವಹೇಳನೆ ಮಾಡಿದ ಅಪಾದನೆಗಾಗಿ ರೂ. 20 ಜುಲ್ಮಾನೆ ವಿಧಿಸಲಾಯಿತು.

ನ್ಯೂಕಿಂಗ್ ಜು 16—ರಷ್ಯವು ಮಂಚೂರಿಯಾದಿಂದ ಯುದ್ಧ ಸಲಿಗೆ ಮಾಡಿ ಕೈಗಾರಿಕಾಸಂವರ್ಧನೆಗಳನ್ನು ಸಾಗಿಸಿರುವದು ಇದನ್ನು ಚೈನಾ ಅಮೇರಿಕಾ ಬ್ರಿಟಿಷ್ ಪ್ರತಿಭಟಿಸಿದೆ

ಪರಲೋಕದಲ್ಲೂ ಗಾಂಧೀಜಿಗೆ ವಿರಾಮವಿಲ್ಲ !

ಗೋವಿಂದ ವಲ್ಲಭ ಪಂತರು ಬಾಜಾರಾಘವ ದಾಸನೆಂಬ ಅಭ್ಯರ್ಥಿಯನ್ನು ಚುನಾವಣೆಗಾಗಿ ಬಲಪಡಿಸುತ್ತಾ "ಈತನು ಒಳ್ಳೇ ಗಾಂಧೀ ಭಕ್ತನು ನೀವು ಈತನಿಗೆ ಓಟು ಕೊಟ್ಟಲ್ಲಿ ಪರಲೋಕದಲ್ಲಿರುವ ಗಾಂಧಿಯು ಸಂತೋಷಗೊಳ್ಳುವನು" ಎಂದು ಹೇಳಿದನು ಗಾಂಧೀಜಿಗೆ ಪರಲೋಕದಲ್ಲಿಯೂ ಕೂಡ ಈ ಚುನಾವಣೆಗಳು ವಿಶ್ರಾಂತಿಯನ್ನು ಕೊಡುವಂತಿಲ್ಲ.

ಟೋಕಿಯೋ ಜು 16—ರಷ್ಯಾದಲ್ಲಿ ಇನ್ನೂ 603000 ಜಪಾನು ಖೈದಿಗಳಿರುವರೆಂದು ಆರೋಪ.

ಜಯಪುರ ಜು 16—ಕಾಂಗ್ರೆಸ್ ಮಹಾಧಿವೇಶದ ವೆಚ್ಚ 25 ಲಕ್ಷ ರೂ. ನಿಧಿ ಮಾಡಲಾಗಿದೆ.

ಬೆಂಗಳೂರು — ಎಫಿಷೆನ್ಸಿ ಆಡಿಟ್ಟಿನವರು ಇದುವರೆಗೆ 134 ಸರ್ಕಾರೀ ಕಛೇರಿಗಳನ್ನು ಪರಿಶೀಲಿಸಿ ಅತೃಪ್ತಿ ಕಂಡಕಡೆ ಅಧಿಕಾರಿಗಳನ್ನು ಶಿಕ್ಷಿಸುವ ಕಾರ್ಯಕ್ರಮ ಕೈಗೊಂಡಿದ್ದಾರೆ.

ಲಂಡನ್, ಜು 16 — ನೈಜಾಂರಿಗೆ ಸೇರಿದ ಒಂದು ಕೋಟಿ ಪೌಂಡುಗಳ ವಜ್ರ ವೈಢೂರ್ಯಗಳು ರಹಸ್ಯವಾಗಿ ಬ್ರಿಟನ್ನಿಗೆ ಸಾಗಿಸಲಾಗಿದೆ ಎಂದು ಹೇಳಲಾಗಿದೆ.

ನಂದಗಾವ — ಇಲ್ಲಿಯ ಮುಸ್ಲಿಮರು ನಿಜಾಂರಿಗೆ ಕೊಟ್ಟಿರುವ ಬುದ್ಧಿವಾಲದ ಅವರು ಭಾರತ ಯೂನಿಯನ್ ಸೇರಿ ಸುಖವಾಗಿರಿ ಎಂದು.

ಟೋಕಿಯೋ ಜು 16 — ರಷ್ಯಾದಲ್ಲಿ ಇನ್ನೂ 603000 ಜಪಾನ್ ಖೈದಿಗಳಿರುವರೆಂದು ಆರೋಪ

ದೆಹಲಿ, ಜು 16 — ಭಾರತಕ್ಕೆ ಅಧಿಕಾರಾಡಳಿತ ವರ್ಗವಾದ ಆಗಸ್ಟ್ 15 ರ ದಿನವನ್ನು ಇತಿಹಾಸದಿಂದ ಆಚರಿಸಬೇಕೆಂದು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಹೇಳಿದ್ದಾರೆ.

ಬೊಂಬಾಯಿ, ಜು 16 — ಬೊಂಬಾಯಿನಲ್ಲಿ ಒಂದು ಗುಪ್ತ ಸಂಸ್ಥೆಯು ಹೈದರಾಬಾದಿಗೆ ಗುಟ್ಟಾಗಿ ಬಟ್ಟೆ ಕಬ್ಬಿಣ ಸಾಮಾನು ಮುಂತಾದುವನ್ನು ಕಳ್ಳತನದಿಂದ ಸಾಗಿಸಲು ನೆರವು ನೀಡುತ್ತಿ

ಷಯವಾಗಿ 12 ಮಂದಿ ದಸ್ತಿ

ಬಿ.

ಭವಿಷ್ಯ

ಮೇಷ—ಕಷ್ಟಗಳಿಂದ ಕೂಡಿದ ವಾರ ಆರ್ಥಿಕ ಸಮಸ್ಯೆಗಳು ಸಿವಾರಣೆಯಾಗಿ ಸಂತೋಷಾಂತಿ ಲಭಿಸುತ್ತದೆ. ಆರೋಗ್ಯವುಂಟು

ವೃಷಭ—ಆರೋಗ್ಯವುಂಟು; ಮನಸ್ಥಿತಿ ಸಾಮಾನ್ಯ ವಿದ್ಯಾರ್ಥಿಗಳಿಗೆ ಭೀತಿ

ಮಿಥುನ—ಕಲಹದ ಭಯ; ಕ್ರಯಗಳ ತಾಪ ಮಾನಸಿಕ ಧನಚಿಂತೆ.

ಕರ್ಕಾಟಕ—ಆರೋಗ್ಯವುಂಟು ಆಲಸ್ಯವು ನಿವಾರಣೆಯಗುತ್ತದೆ; ಖರ್ಚು ಹೆಚ್ಚು.

ಸಿಂಹ—ಆಲಸ್ಯಪ್ರದವಾದ ವಾರ; ಕಳ್ಳರ ಸಂಬಂಧವಾದ ಚಿಂತೆ

ಕನ್ಯಾ—ಆರೋಗ್ಯವಿಲ್ಲ; ಚಿಂತೆ ಹೆಚ್ಚು ವ್ಯವಹಾರದಲ್ಲಿ ಶ್ರಮ ಹೆಚ್ಚು ಫಲ ಅಲ್ಪ ನಿರಾಶೆ ಹೆಚ್ಚುವುದು

ತುಲ—ವಿಘ್ನಗಳಿಂದ ಕೂಡಿದ ವಾರ ಆರ್ಥಿಕ ಮುಗ್ಗಟ್ಟು ಹೆಚ್ಚುತ್ತದೆ ಶಾರೀರಿಕ ಸುಸ್ಥಿತಿ ಇರುವದಿಲ್ಲ.

ವೃಶ್ಚಿಕ—ಕೈಗೊಂಡ ಕಾರ್ಯಗಳು ಸಿದ್ಧಿಸುವುವು ಆರೋಗ್ಯವುಂಟು ಆರ್ಥಿಕಲಾಭವುಂಟು ವ್ಯವಹಾರದಲ್ಲಿ ಜಯವುಂಟು.

ಧನಸ್ಸು—ಧನಲಾಭವುಂಟು ವ್ಯವಹಾರದಲ್ಲಿ ಪ್ರಗತಿಯುಂಟು ಮಾನಸಿಕ ಆನಂದವುಂಟು.

ಮಕರ—ಆರೋಗ್ಯವು ಉತ್ತಮವಾಗಿರುತ್ತದೆ ಆನಂದದಾಯಕವಾದ ವಾರ

ಕುಂಭ—ಆರೋಗ್ಯವಿರುವುದಿಲ್ಲ ಅಸೂಯೆಯ ಭಯವುಳ್ಳ ವಾರ ಶತ್ರುಗಳ ಭಯವಿದೆ

ಮೀನ—ಬಹಳ ಎಚ್ಚರದಿಂದಿರಬೇಕಾದ ವಾರ, ಮೋಸಗಾರರ ವಿಷಯದಲ್ಲಿ ಒಂದು ಕಣ್ಣಿಟ್ಟುಕೊಂಡು ವರ್ತಿಸಬೇಕು

ವುಡ್‌ಲ್ಯಾಂಡ್ಸ್
16—7—48 ರಿಂದ

ಅಸ್ಥಾನವಿದ್ವಾನ್ ಬಿ. ಎಸ್. ರಾಜಯ್ಯಂಗಾರ್, ಉದಯಶಂಕರ್ ಡ್ಯಾನ್ಸಿಂಗ್ ಗ್ರೂಪಿನಪ್ರಸಿದ್ಧ ನಟಿ ಲಕ್ಷ್ಮಿ ಶಂಕರ್ ಪಾತ್ರವಹಿಸಿರುವ

ಭಕ್ತ ತುಳಸೀದಾಸ

[ಅಮೋಘ ತಮಿಳು

ಪ್ರತಿದಿನ 3 ಪಿ. ಬಿ. ಎ

At Opera

ಯಶಸ್ವಿ 8 ನೇ ವಾರ

ಯು. ಆರ್. ಜೀವರತ್ನ, ಎಸ್ ಎಂ. ಕುಮಾರೇಷ್, ಪುಳಿಮೂಟೈ ಸಂತಾನಲಕ್ಷ್ಮಿ ಪಾತ್ರವಹಿಸಿರುವ

ಅಭಿಮನ್ಯು

(ತಮಿಳು)

...ಲ್ವೆ ಮುಷ್ಕರ ?

...ಲ್ವೆ ಮಂತ್ರಿ ಶ್ರೀ. ಟಿ. ಮರಿಯಪ್ಪನ್ನು ರೈಲ್ವೆ ಕಾರ್ಮಿಕ ಸಂಘದ ...ಾರಿ ಸಮಿತಿ ಸದಸ್ಯರು ಇತ್ತೀ...ಟಿ ಮಾಡಿ ಶ್ರೀ ರಾಘವರಾಜ್ ...ಶ್ರೀ ಕೆ. ಎನ್. ಎಸ್. ಮೂರ್ತಿ ...ಖುಲಾಸೆ ಮಾಡಬೇಕೆಂದು ...ಸಲು ಈ ವಿಷಯದಲ್ಲಿ ಪ್ರಯೇ...ಸಾಧ್ಯವಿಲ್ಲವೆಂದು ಅವರು ತಿಳಿ...ರೆಂದು ವರದಿ.

...ಾ॥ 17 ರ ವರದಿ ಪ್ರಕಾರ 72 ಗಂಟೆ ...ದೊಳಗಾಗಿ ಮೈಸೂರು ಸರ್ಕಾರದ ...ರು ರೈಲ್ವೆ ಕಾರ್ಮಿಕ ಮುಖಂಡರುಗಳ ...ಖುಲಾಸೆ ಮಾಡುವ ವಿಷಯದ ...ಸೂಕ್ತ ಕಾರ್ಯಕ್ರಮ ಕೈಗೊಳ್ಳದಿ...ತಾವು ಮುಷ್ಕರ ಹೂಡಬೇಕಾಗಿ...ತೆಂದು ಸರ್ಕಾರದ ವರ್ತನೆ ಖಂ...ರೈಲ್ವೆ ಕಾರ್ಮಿಕರು ನಿರ್ಣಯಿಸಿ

...ಯವಾಡ ಜೂ 15—ಗಡಿಯಲ್ಲಿ ...ಹವಾಲ್ದಾರನೊಬ್ಬನು 9 ಅಂ...ಕಳ್ಳಕಾರಿಯೊಂದಿಗೆ ದಸ್ತಗಿರಿ ...ಲ್ಪಟ್ಟನು.

...VERSITY of MYSORE

...ce of the University of Mysore,

...14th July 1948

...49/47-48

...ication.

...by notified for infor... ...the public that an Inter... ...College at Mandya has ...pened with effect from ...adamic year 1948-49.

...ly junior Intermediate ...s with Physics, Chemis... ...and Mathematics as optiona... ...up are started.

...tudents intending to join ...College may apply to the ...erintedent, Intermediate Co..., Mandya.

By order,
D. S. Gordon,
Registrar.

॥ಶ್ರೀ॥ ನಂ. 97

"ಪ್ರ ಬೋ ಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

— ಯಜ್ಞಗಳಿಂದ —
ಕಲಿಯುಗದಲ್ಲಿ ಕೃತಯುಗ

(ಮುಂದುವರಿದುದು)

ಇಂದೀಗ ಭಾರತದಲ್ಲಿ ಮೂರ್ಖತನದ ಸಾಮ್ರಾಜ್ಯವಿದೆ. ಆದ್ದರಿಂದಲೇ ಇಲ್ಲಿ ಯಾವುದೇ ಧರ್ಮ ಅಥವಾ ಮೋಕ್ಷದ ಗಂಭೀರ ವಿಷಯವು ಏಳುವುದಿಲ್ಲ. ಅರ್ಥಶಾಸ್ತ್ರದ ವಿವೇಚನೆ ಕಾಮಶಾಸ್ತ್ರದ ವಿವೇಚನೆಗಳನ್ನು ಮಾಡುವುದರಲ್ಲಿ ಮಾನವರ ಬುದ್ಧಿಯು ಕೆಲಸ ಮಾಡುವುದಿಲ್ಲ. ಮೆದುಳು ಅಶಕ್ತವೂ ಹೃದಯವು ದುರ್ಬಲವೂ ಆಗಿಬಿಟ್ಟಿದೆ. ಕೇವಲ ಉಪನ್ಯಾಸ ಮಾಡುವ ಪ್ರಕೃತಿ ಉಳಿದುಹೋಗಿದೆ.

ನಮ್ಮಲ್ಲಿ ಚಾಣಕ್ಯನು ಮಹಾ ರಾಜನೀತಿಜ್ಞನಾಗಿ ಹೋಗಿದ್ದಾನೆ. ಈತನ 'ಅರ್ಥಶಾಸ್ತ್ರ'ದ ಮೇಲೆ ದೊಡ್ಡ ಪಾಶ್ಚಾತ್ಯ ವಿದ್ವಾಂಸರೂ ಕೂಡ ಅನೇಕ ಟೀಕೆಗಳನ್ನು ರಚಿಸಿದ್ದಾರೆ. ಆದರೆ ನೀತಿಶಾಸ್ತ್ರದ ಈ ಮಹಾ ಪಂಡಿತನು ತಾನು ಮಹಾವಿರಕ್ತನಾಗಿದ್ದಾನೆ ಎಂಬಸಲು ಅಡವಿಗಳಲ್ಲಿ ಒಂದು ಹುಲ್ಲಿನ ಗುಡಿಸಲಿದ್ದಿತು 'ಮುದ್ರಾರಾಕ್ಷಸ'ದಲ್ಲೊಂದು ಪ್ರಸಂಗ ಬಂದಿದೆ. ವಿದೇಶಿಯೊಬ್ಬನು ಭಾರತ ವರ್ಷದ ಪರಿಸ್ಥಿತಿಯನ್ನು ನೋಡಲು ಬಂದವನು ನೋಡುತ್ತಾನೇನನ್ನು, ಹಲವಾರು ನ್ಯಾಯಾಲಯಗಳು ನಿರ್ಮಿತವಾಗಿದ್ದುವು. ಆದರೆ ಅಲ್ಲಿ ಯಾವುದೇ ವಿವಾದವಿಲ್ಲ, ಯಾವುದೇ ಮೊಕದ್ದಮೆಯಿಲ್ಲ, ಯಾವುದೇ ಅಧಿಯೋಗವಿಲ್ಲ. ಜೈಲುಗಳೂ ಸೆರೆಮನೆಗಳೂ ನಿರ್ಮಿಸಲ್ಪಟ್ಟಿದ್ದುವು. ಆದರೆ ಅವುಗಳಲ್ಲಿ ಒಬ್ಬನೇ ಒಬ್ಬ ಸೆರೆಯಾಳಿರಲಿಲ್ಲ. ನಮ್ಮಲ್ಲಿ ರಾಜನಿಗೆ ಪುತ್ರಾದಿಗಳು ಜನ್ಮವನ್ನಾದಾಗ ಸೆರೆಯಾಳುಗಳನ್ನು ಬಿಡುತ್ತಿದ್ದಿತು. ರಘುವಿನ ಜನ್ಮದಲ್ಲಿ ಸೆರೆಯಾಳುಗಳನ್ನು ಬಿಡುವ ಪದ್ಧತಿಯಿದ್ದಿತು ಆದರೆ ನೋಡಲಿ ಯಾವ ಸೆರೆಯಾಳೂ ಇದ್ದಿಲ್ಲ. ಆತನ ರಾಜ್ಯವೇನೂ ಸಣ್ಣದಿದ್ದಿಲ್ಲ, ಏಳು ದ್ವೀಪಗಳವರೆಗೆ ಹರಡಿದ್ದಿತು! ಆತನ-ದಿಲೀಪ ರಾಜನ-ರಾಜ್ಯದಲ್ಲಿ ಒಬ್ಬನೂ ಅಪರಾಧಿಯಿಲ್ಲ, ಸೆರೆಯಾಳಿಲ್ಲ, ಪುತ್ರನ ಜನ್ಮೋತ್ಸವನದಲ್ಲಿ ಬಿಡುವುದಾರನ್ನು ? ಆತನು ರಘುವಿನ ಜನ್ಮದಿಂದ ತನ್ನನ್ನೇ ಪಿತೃಗಳ ಋಣಬಂಧನದಿಂದ ಮುಕ್ತಗೊಳಿಸಿಕೊಂಡನು. ಹೀಗೆ ನಮ್ಮಲ್ಲಿಯ ಹಳೆಯ ಪದ್ಧತಿಯಿದ್ದಿತು.

ಇಡೀ ಸ್ಥಿತಿ ಚಾಣಕ್ಯನ ಕಾಲದಲ್ಲಿಯೂ ಇದ್ದಿತು. ಒಂದು ಸಲ ವಿದೇಶಿಯೊಬ್ಬನು ನೋಡಲು ಬಂದನು. ಜನರು ಚಾಣಕ್ಯನಾದರೋ ಕಾಡಿನಲ್ಲಿರುತ್ತಾನೆಂದು ಹೇಳಿದರು. ಇದನ್ನು ಕೇಳಿ ಆತನಿಗೆ ಆಶ್ಚರ್ಯವಾಯಿತು; ಇಷ್ಟು ದೊಡ್ಡ ಸಾಮ್ರಾಜ್ಯದ ಶಾಸನ, ಶಾಸಕ ಸಿರುವುದು ಕಾಡಿನಲ್ಲಿ! ಅವನನ್ನು ಹುಡಕಲು ಹೊರಟನು. ಮಂತ್ರಿಯು ಯಾವುದೋ ಒಳಸಂಚಿನಲ್ಲಿ ಮಗ್ನನಾಗಿರಬಹುದೆಂದು ಯೋಚಿಸಿದ್ದನು. ಆದರೆ ಅಲ್ಲಿ ಹೋಗಿ ನೋಡುವಾಗ ಒಳಸಂಚು ಮುಂತಾಗಿ ಏನೂ ಇರಲಿಲ್ಲ. ಬರೀ ಹುಲ್ಲಿನದೊಂದು ಗುಡಿಸಲಿದೆ, ಅದೂ ಮುಟ್ಟಿದಲ್ಲಿ ಬೀಳುವ ಸ್ಥಿತಿಯಲ್ಲಿತ್ತು. ಅಲ್ಲಿ ಸಾಮಗ್ರಿಯಾದರೂ ಏನಿದೆ ? ಒಂದೆಡೆ ದರ್ಭೆ ಬದ್ದಿದೆ, ಇನ್ನೊಂದೆಡೆ ಸೀವಾರಭಾನ್ಯ ಬಿಟ್ಟಿದೆ. ಮತ್ತೊಂದು ಕಡೆ ಬಾಲ ಬ್ರಹ್ಮಚಾರಿಗಳು ವಿದ್ಯಾಧ್ಯಯನ ಮಾಡುತ್ತಾ ಇದ್ದಾರೆ; ಚಾಣಕ್ಯನು ಕುಳಿತುಕೊಂಡು ಸಮಸ್ತ ಸಾಮ್ರಾಜ್ಯದ ಶಾಸನ ನಡೆಸುತ್ತಾ ಇದ್ದಾನೆ ಇಂತಹ ಸುವ್ಯವಸ್ಥೆಗೆ ಕಾರಣವೇನಿದ್ದಿತು ? ಆ ಕಾಲದಲ್ಲಿ ಭಾರತದ ಜನತೆಯಲ್ಲಿ ಬುದ್ಧಿಯು ದಿವಾಳಿ ಹೊಂದಿರಲಿಲ್ಲವೆಂಬುದೇ ಅಲ್ಲವೆ ?

ಗಾಯತ್ರಿಯು ನಮ್ಮಗಳಿಗೆ ಮಹಾ ಮಂತ್ರ. ಅದರಲ್ಲಿ ಪ್ರಾರ್ಥಿಸಿರುವುದಾದರೂ ಇದನ್ನೇ—" ಹೇ ಪುರುಷೋ ಹೇ ಸರ್ವಾಂತರ್ಯಾಮೀ, ಪರಮಾತ್ಮಾ!! ನಮ್ಮ ಬುದ್ಧಿಯನ್ನು ಸದ್ವಿಚಾರದ ಕಡೆಗೆ ಪ್ರೇರಿತಗೊಳಿಸು ಅಂದರೆ ನನಗೆ ಸದ್ಬುದ್ಧಿಯೂ ಸುಬುದ್ಧಿಯೂ ದೊರೆಯಲಿ" ಸಮಸ್ತ ವೇದಗಳ ಸಾರವಾದ ಗಾಯತ್ರೀ ಮಂತ್ರದ ಅಂತಿಮ ಅರ್ಥವು ಇದೇ ಆಗಿದೆ. ಗೋಸ್ವಾಮಿಯಾ ತುಲಸೀದಾಸರೂ ಕೂಡ ಹೇಳಿರುವುದೇನೆಂದರೆ— ರಾಮನಾಮದ ಮಹಿಮೆಯು ಅಪಾರವಾದುದು. ರಾಮನಿಗಿಂತಲೂ ಹೆಚ್ಚು ರಾಮನಾಮಕ್ಕೆ ಮಹಿಮೆಯಿದೆ. ರಾಮನಾದರೂ ಮಾಡಿದ್ದೇನು ? ಪಾಪಭರಿತಳಾದ ಗೌತಮ ಪತ್ನೀ ಅಹಲ್ಯೆಯನ್ನು ಉದ್ಧರಿಸಿದನು. ಇದೇ ಅಲ್ಲವೆ ? ಇದು ದೊಡ್ಡ ಸಂಗತಿಯೇ ? ಆದರೆ ಸ್ತ್ರೀಗಾಗಿಯಾದರೋ ಇದು ಎಲ್ಲಕ್ಕಿಂತ ದೊಡ್ಡದು. ಸ್ತ್ರೀಗೆ ಪಾತಿವ್ರತ್ಯ ಧರ್ಮವೇ ಅತ್ಯಂತ ದೊಡ್ಡ ಧರ್ಮ. ಸ್ತ್ರೀಗೆ ಆಕೆಯ ಈ ಧರ್ಮವು ಭಂಗವಾದುದಕ್ಕಿಂತ ಹೆಚ್ಚಿನ ಪತನ ಬೇರೆಯಿಲ್ಲ. ಪಾಪಭರಿತಳಾದ ಅಹಲ್ಯೆಯನ್ನು ಸರ್ವಾಂತರ್ಯಾಮಿಯಾದ ರಘುವೀರ ರಾಮನು ತನ್ನ ಚರಣಗಳ ರಜಸ್ಪರ್ಶದಿಂದ ಉದ್ಧರಿಸಿದನು. ಈ ಲೋಕೋತ್ತರ ಕಾರ್ಯವನ್ನು ಮಾಡಿದನು. ಆದರೆ ನಾಮವು ಕೋಟಿ ಖಳರ ಕುಮತಿಯನ್ನು ಸುಧಾರಿಸುವುದರಲ್ಲಿ ಜಯಶೀಲವಾಯಿತು. ಅದಾದರೋ ಅರ್ಬುದ ಗಟ್ಟಲೆ, ಖರ್ವಗಟ್ಟಲೆ, ಅಸಂಖ್ಯಮುಂದಿಯ ಮೂರ್ಖತನವನ್ನು ನಾಶಮಾಡಿ ಸುಬುದ್ಧಿಯನ್ನು ದಯಪಾಲಿಸಿತ್ತು. ಅಹಲ್ಯೆಯು ಅದಾವ ಪಾಪಮಾಡಿದಳೋ ಅದಾದರೂ ದುರ್ಮತಿಯದೇ ಫಲವಾಗಿದ್ದಿತು. ದುರ್ಮತಿಯಿಂದಲೇ ಎಲ್ಲಾ ಪಾಪಗಳು ಬರುವುವು. ಪಾಪದಲ್ಲಿ ಪ್ರವೃತ್ತಿಯು ಇದರಿಂದಲೇ ಉಂಟಾಗುವುದು. ಅನೇಕ ಪ್ರಕಾರದ ದುರ್ವಿಚಾರದಲ್ಲಿ ಅನುರಕ್ತಿಯು ಕೇವಲ ದುರ್ಮತಿಯ ಪರಿಣಾಮವೇ ಆಗಿದೆ. ಇದೇ ದುರ್ಮತಿಯಿಂದಲೇ ಅಹಲ್ಯೆಯು ಪಾಪಗಳ್ದುಳು. ಭಗವಂತನ ನಾಮ ಸ್ಮರಣೆಯಿಂದ ಆ ದುರ್ಮತಿಯು ದೂರವಾಗುವುದು, ಆದುದರಿಂದಲೇ ತಾನೆ ನಾಮಕ್ಕಿಷ್ಟು ಮಹಿಮೆಯಿದೆ. [ಸಶೇಷ

Save the Cow
ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, Chamarajapuram, Mysore

ಹಿಂದೂ ಕೋಡು ಬಿ

ಕಾನ್ಸ್ಟಿಟ್ಯೂ ಅಸೆಂಬ್ಲಿಯು ಸಭೆ ಜೂಲೈ ತಿಂಗಳಲ್ಲಿ ಆಗುವದಿದ್ದು ಅದರಿಂದ ಹಿಂದೂಕೋಡಿನ ಮೆ ವಿಚಾರಣೆಯು ಫಲಿಗಾಲದ ಸಭೆ ಬರಬಹುದೆಂದು ತಿಳಿಯಲಾಗಿ ಆದರೆ ಈ ಅಸೆಂಬ್ಲಿಯು ಸಭೆ ಅಕ್ಟೋಬರಿನವರೆಗೆ ಮುಂದುವರೆ ಅದರ ಪಾರ್ಲಿಮೆಂಟಿನ ರೂಪದ ಯು ಆಗಸ್ಟಿನ ನಾಲ್ಕರಿಂದ ಆರಂಭವಾಗುವುದು. ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನವನ್ನು ಈ ಹಿಂದೂ ಕೋಡ್ ಬಿಲ್ಲಿಗೇ ಕೊಡಲಾಗಿದೆ. ಇದ ವಿಚಾರಣೆಗಾಗಿದ್ದ ಸೆಲೆಕ್ಟ್ ಕಮಿಟಿಯ ಮೀಟಿಂಗು ಜುಲೈ 20 ಕ್ಕೆ ಆಗುತ್ತದೆ. ಈ ರೀತಿಯಾಗಿ ಕಾಲವು ಬಹಳ ಕಳೆಯಾಗಿದೆ ಹಿಂದೂಕೋಡನ್ನು ಹಿಂ ವಿರೋಧಿಸಿದವರೆಲ್ಲರೂ ಈಗಲೂ ವಿರೋಧಿಸಬೇಕು. ಸಭೆಗಳನ್ನು ಮಾಡಿ, ವುಗಳನ್ನು ಇಂಡಿಯಾ ಸರಕಾರಕ್ಕೆ ಸಬೇಕು. ಹಿಂದೂಕೋಡಿಗೆ ವಿರೋಧವಾಗಿ ತಂತಿ ಮತ್ತು ಕಾಗದಗಳ ಕಳಿಸಬೇಕು.

ಗೋವಧ ರಾ ಜ ಸ್ಥಾ

ಹೊಸದಾಗಿ ಸ್ಥಾಪಿತವಾ ಸ್ಥಾನ ಸಂಘದ ಸರಕಾರವು ತನ್ನ ಪ್ರಾಂತ್ಯದಲ್ಲಿಯೂ ಗೋವಧೆ ಅಪ್ಪಣೆಯಿತ್ತಿದೆ ಇದಕ್ಕಾಗಿ ವಾದಗಳು ! ರಾಜ್ಯಗಳಷ್ಟೇ ಸಂಘಗಳೂ ಕೂಡ ಇದನ್ನು ಅನು ಬೇಕು. ಎಷ್ಟೋ ಹಿಂದೂರಾಜ್ಯ ಹಿಂದಿನಿಂದಲೂ ನಿಂತಿದೆ. ಈಗ ಸಿ ತ್ತಿದೆ. ಆದರೆ ಈಗಾದ ಹೊಸ ರಾ ಸಂಘಗಳು ಈ ಕಾನೂನನ್ನು ತ ಅದರಲ್ಲಿ ಸೇರಿದ ಎಲ್ಲಾ ರಾಜ್ಯ ಯೂ ಇದು ಅನ್ವಯಿಸುವುದು. ದೆ ರಾಜ್ಯಗಳಲ್ಲಿ ಮೈಸೂರೂ ಈ ಕಾ ನನ್ನು ಮಾಡಿದೆ : ಹೀಗೆ ರಾಜ್ಯಗ ಲ್ಲಾ ಗೋವಧೆ ನಿಂತಿತೆಂದಾದರೆ ಅ ಪ್ರಭಾವವು ಇತರ ಎಲ್ಲಾ ಪ್ರಾಂತ ಗಳಲ್ಲಿಯೂ ಬೀಳುವುದು. ಹೊಸಪೇಟೆ ಯಲ್ಲಿ ಶ್ರೀ ರಾಮಕೃಷ್ಣ ಡಾಲಿಮಿಯಾ ರವರ ಪ್ರಯತ್ನದಿಂದಾದ ಸಾರ್ವಜನಿಕ ಸಭೆಯಲ್ಲಿ ಗ್ವಾಲಿಯಾರಿನ ಮಹಾರಾಜರು 'ಕಾನ್ಸ್ಟಿಟ್ಯೂಟ್ ಅಸೆಂಬ್ಲಿ ಯಲ್ಲಿ ಇದರ ವ್ಯವಸ್ಥೆ ಮಾಡದಿದ್ದಲ್ಲಿ ರಾಜ್ಯಗಳು ಅದರಲ್ಲಿ ಭಾಗವಹಿಸಬಾರದು' ಎಂದು ತಮ್ಮ ಸಂದೇಶದಲ್ಲಿ ಅಂದಿದ್ದರು. ಆದರೆ ಅದು ಮನಸ್ಸಿಗೆ ತಂದು ಕಾಣುತ್ತದೆ.

ದುರಳಿಸಬಹುದು

ಧ ಸಾಮಾಗ್ರಿಗಳ ಸಮೇತ
ಸ್ಥಾನ ವಿಮಾನವೊಂದು ಹೈದ
ತಲುಪಿತು ಎಂದು ನವದೆಹ
ಬಂದಿದೆ. ವಿಮಾನವನ್ನು
ದ್ದ ಸಾರಥಿ ಬ್ರಿಟೀಷರವನು.
ಮಾನ ನಿಲ್ದಾಣದಲ್ಲಿ ನಿಂತು,
ನಡೆಸಲಿಲ್ಲವೆಂದು ಹೇಳ
ಈ ಕೃತ್ಯದಿಂದ ಭಾರತ ಸರ್ಕಾ
ಆಲೋಚನಾ ಮಗ್ನವಾಗಿದೆ.
ಕೃತ ವಿಮಾನ ಕಂಡು ಬಂದರೆ
ಡೆದುರುಳಿಸು ಆಜ್ಞೆಯನ್ನು ಭಾರತ
ರ್ಕಾರ ಕೊಡುವ ನಿರೀಕ್ಷಣೆಯಿದೆ.

ಸುದ್ದಿಗಳು

ಕ್ಕೆ ಸ್ವಸ್ಥಾನವಾದ ಹೈದರಾ
ಕ್ಕೆ ಹೊಂಟುಹೋದ ಮೈಸೂರು
ದ್ಯಾಲಯದ ಉರ್ದು ಪ್ರೊಫೆ
ಅಬ್ದುಲ್ ಕಾದಿರ್ ಸರ್ವರಿ
ತಮ್ಮ ಕೆಲಸಕ್ಕೆ ರಾಜೀನಾಮೆ
ವುರಾಗಿ ತಿಳಿಯಬಂದಿದೆ.

ೀಕ್ ಸಕ್ಯೆಸ್—ಸ್ಯಾಲಿಸ್ಬೆರಿನ
ಸ್ಥಿತಿ ಹದಕ್ಕೆ ಬರಬೇಕಾದರೆ,
ಮಿಲಿಟರಿ ಕಾರ್ಯಾಚರಣೆ
ನು ಒಪ್ಪಂದ ಮ
ಟು ಬರ್ನಡೆಟರು

ಸ್ಮಾರಕ ನಿಧಿಗೆ ಶ್ರೀಮನ್ಮ
ರವರು ಉದಾರ ಚಂದಾ ಕೊಡ
ಂದು ತಿಳಿಯಬಂದಿದೆ

ಮಂತ್ರಿಗಳ ಆಜ್ಞೆ ಹಡೆದು ಬಿಡಲಾಯಿತು

ಸ್ತಗಿರಿ ಮಾಡಲ್ಪಟ್ಟು ಜಾಮೀ
ಮೇಲೆ ಬಿಡಲ್ಪಟ್ಟ ತಾಯಿನಾಡು
ಡೈಲಿ ನ್ಯೂಸ್ ಸಂಪಾದಕರು
ನ್ನು ಮತ್ತು ಶ್ರೀ ಎಲ್. ಎಸ್.
ುಂವರುಗಳನ್ನು "ಎ" ತರಗತಿ
ದಿಗಳಾಗಿಡಬೇಕೆಂದು ನ್ಯಾಯಸ್ಥಾನ
ಸೂಚಿಸಿತ್ತು. ಜೈಲು ಸೂಪರಿಂಟೆಂಡೆಂ
ರು ಸಂಬಂಧಪಟ್ಟ ಮಂತ್ರಿಗಳ ಆಜ್ಞೆ
ಡೆದು ಮೊನ್ನೆ ಬುಧವಾರ 3 ಮಂದಿ
ಯನ್ನು ಜೈಲಿನಿಂದ ಬಿಟ್ಟರು.

ಉಪವಾಸ ಮುಕ್ತಾಯ ಮಾಡುವಂತೆ ಕೋರಿಕೆ

ಉಪವಾಸವನ್ನು ಕೂಡಲೇ ನಿಲ್ಲಿಸಿ
ಹೈದರಾಬಾದಿಗೆ ಬಂದು ಸಾರ್ವಜನಿಕ
ಸೇವಾಕಾರ್ಯ ಕೈಗೊಳ್ಳಿ ಎಂದು ಹೈದ
ರಾಬಾದಿನ ನಾಲ್ವರು ಕಾಂಗ್ರೆಸ್ ಧುರೀ
ಣರು ಪ್ರೊ|| ಭನ್ಸಾಲಿಗೆ ತಂತಿ ಮಾಡಿ
ದ್ದಾರೆ.

ವರ್ತಮಾನ ಸಂಗ್ರಹ

ವಾಷಿಂಗ್‌ಟನ್ ಜೂ 15—1949 ನೇ ಸಾಲಿನಲ್ಲಿ ಜಪಾನು 2,200,000 ಟನ್ ಆಹಾರವನ್ನು ಆಮದು ಮಾಡಿ ಕೊಳ್ಳಲೇ ಬೇಕಾಗಿದೆ.

ಲಂಡನ್ ಜು. 14—ಪ್ಯಾಲಿಸ್ಟೈನ್ ಯು ದ್ಧ ವು ತೀವ್ರಗೊಳ್ಳಬೇಕೆಂದು ಅರಬ್ಬರು ಅಮಾಮ್‌ನಲ್ಲಿ ಘೋಷಿ ಸುತ್ತಾ ಪ್ರದರ್ಶನ ನಡೆಸಿದರು.

ಹೈದರಾಬಾದ್ ವ್ಯವಹಾರ ವಿಷಯ ದಲ್ಲಿ ಭಾರತ ಮಂತ್ರಿ ಮಂಡಲಕ್ಕೆ ಯಾವ ವಿಧವಾದ ಭಿನ್ನಾಭಿಪ್ರಾಯವೂ ಇಲ್ಲ. ಮಂತ್ರಿಗಳೆಲ್ಲರೂ ಸಂಯುಕ್ತ ಜವಾಬ್ದಾರಿಯುಳ್ಳವರು ಎಂದು ಸರ್ದಾರ್ ಪಟೇಲ್ ಪಾರ್ಲಿಯಾಲದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ. ಹೈದರಾಬಾದ್ ಭಾರತಕ್ಕೆ ಸೇರಿದರೆ ಮಾತ್ರ ಒಪ್ಪಂದದ ಮಾತು ಎಂದವರು ತಿಳಿಸಿದ್ದಾರೆ.

ದೆಹಲಿ—ಪಶ್ಚಿಮ ಪಾಕಿಸ್ತಾನದಿಂದ ಬಂದು ಫೂರ್ಕಾ ಸಿಪಾಯಿ ವೇಷ ಧರಿಸಿ ತಿರುಗುತ್ತಿದ್ದ ಒಬ್ಬ ಮುಸ್ಲಿಂ ಯುವಕನು ದಸ್ತಗಿರಿ ಮಾಡಲ್ಪಟ್ಟಿದ್ದಾನೆ.

ಕರಾಚಿ—ಇರಾಕಿನಿಂದ 90 ಸಾವಿರ ರೂ. ಬೆಲೆ ಚಿನ್ನವನ್ನು ಒಬ್ಬ ಹುಡುಗ ಪ್ರಯಾಣಿಕನು ಗುಟ್ಟಾಗಿ ತಂದದ್ದನ್ನು ಸರಕಾರ ವಶಪಡಿಸಿಕೊಂಡಿದೆ.

ಬೆಂಗಳೂರು—ಕೈಗಾರಿಕೆ ವ್ಯಾಜ್ಯ ಫೈಸಲ್ಮಾಡುವ ಮತ್ತು ಪಂಚಾಯಿತಿ ನಿಬಂಧನೆ ಗನುಗುಣವಾಗಿ ಶ್ರೀ ರಾಜ ಕಾರ್ಯ ಪ್ರಸಕ್ತ ಟಿ. ಸಿಂಗಾರುವೇಲು ಮೊದಲಿಯಾರ್‌ರು (ಅಧ್ಯಕ್ಷರು) ರಾಜ ಧರ್ಮ ಪ್ರಸಕ್ತ ಶ್ರೀ ಸುಬ್ರಹ್ಮಣ್ಯ ಅಯ್ಯರ್ ರಾಜಧರ್ಮ ಪ್ರಸಕ್ತ ಎಸ್. ವೆಂಕಟರಂಗಯ್ಯಂಗಾರ್ಯ ರೊಡಗೂಡಿದ ಪಂಚಾಯಿತಿ ಕೋರ್ಟನ್ನು ಸರಕಾರದವರು ನೇಮಿಸಿದಾರೆ.

ಬೆಂಗಳೂರು—ಮೈಸೂರು ರಾಜ್ಯಾಂಗ ಸಭೆಯು ಮುಂದಿನ ತಿಂಗಳು ಕಡೇ ವಾರದಲ್ಲಿ ಸೇರುವುದೆಂದು ಹೇಳಲಾಗಿದೆ.

ವಿಶ್ವ ಕರ್ನಾಟಕ ಪತ್ರಿಕಾ ಕಛೇರಿ ಶೋಧನೆ

ಬೆಂಗಳೂರು ವಿಶ್ವಕರ್ನಾಟಕ ದಿನ ಪತ್ರಿಕೆ ಕಛೇರಿಯನ್ನು ನಿನ್ನೆ ಪೋಲೀಸರು ಶೋಧಿಸಿ ನಿನ್ನೆ ಮತ್ತು ಮೊನ್ನೆಯ ಪತ್ರಿಕೆಗಳಲ್ಲಿ ಪ್ರಕಟವಾದ ಉರ್ದು ಲೇಖನವೊಂದರ ಕನ್ನಡ ಭಾಷಾಂತರ ಮೂಲ ಪ್ರತಿಗಳನ್ನು ವಶಪಡಿಸಿಕೊಂಡರು ನಮ್ಮ ಕಛೇರಿಯಲ್ಲಿದ್ದ ಆ ಪತ್ರಿಕೆಗಳನ್ನು ವಶಪಡಿಸಿಕೊಂಡರು. ಬೀದಿಯಲ್ಲಿ ಆ ಪತ್ರಿಕೆಗಳನ್ನು ಮಾರುತ್ತಿದ್ದವರಿಂದಲೂ ಸಹ ವಶಪಡಿಸಿಕೊಳ್ಳಲಾಯಿತು.

ದಸ್ತಗಿರಿ

ಸಾರ್ವಜನಿಕ ರಕ್ಷಣಾ ಕಾಯದೆ ಪ್ರಕಾರ ಮೈಸೂರು ಸಂಸ್ಥಾನದ ರೈಲ್ವೆ ಕಾರ್ಮಿಕ ಸಂಘದ ಅಧ್ಯಕ್ಷ ಶ್ರೀ ಹೆಚ್. ಡಿ. ರಾಘವರಾಜ್ ದುತ್ತು ಸಂಘದ ಕಾರ್ಯದರ್ಶಿ ಶ್ರೀ ಕೆ. ಎನ್. ಎಸ್. ಮೂರ್ತಿ ಮೊನ್ನೆ ಬೆಂಗಳೂರಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು.

ರೋವ್ ಜು. 15
ಸ್ಟರ ಮುಖಂಡರನ್ನು ಸಲ್ಲ
ಪ್ರಯುಕ್ತ. ಪ್ರತಿಭಟಿಸಿ 70
ಕಾರ್ಮಿಕರು ಸಾರ್ವತ್ರಿಕ ಮ
ಹೂಡಿರುವರು. ರೈಲು, ಟ್ರಾ
ಬಸ್ಸು ಎಲ್ಲಾ ತಣ್ಣಗಾಗಿವೆ.

ಶಕ್ತಿ ಸೌಧಾ :
ದೇಹಪುಷ್ಟಿಗೆ
ಮುಖಕಾಂತಿಗೆ
ಶಕ್ತಿ ಸಾಧನೆಗೆ
ಸಂಜೀವನ

ಹೈದರಾಬಾದ್ ಸಮರ ಸಮೀಕ್ಷೆ

(ಜೂ ತಾ || ೧ ರಿಂದ ತಾ ||15 ರ ವರೆಗೆ)

ಆಂಧ್ರ ಭಾಗ

ಲೂಟಿಗಳು

28 ಗ್ರಾಮಗಳು, 71000 ರೂ ಗಳು 80 ತೊಲ ಬಂಗಾರ 21 ಬಸ್ತಾ ಅಕ್ಕಿ 36 ಬಸ್ತಾ ಜೋಳ 6 ಮನೆಗಳು ಪಶುಗಳು.

ದಹನಗಳು

204 ಮನೆಗಳು ಮತ್ತು ಅನೇಕ ಹುಲ್ಲಿನ ಬಣವೆಗಳು.

ಕೆಡಿಸುವಿಕೆ

5 ಮಂದಿ ಸ್ತ್ರೀಯರನ್ನು ಕೆಡಿಸಲಾಯಿತು.

ಮರಣಗಳು

5 ಮರಣಗಳಾದವು.

ಕೆಡಿಸುವಿಕೆಯಿಂದ 1 ಮರಣ.

ಮಹಾರಾಷ್ಟ್ರ ಭಾಗ

ಲೂಟಿಗಳು

50 ಗ್ರಾಮಗಳು 7½ ಲಕ್ಷ ರೂ. ಗಳ ಬೆಳ್ಳಿ ಭಂಗಾರಗಳು 200 ಬಸ್ತಾ ಜೋಳ.

ದಹನಗಳು

ಕೆಡಿಸುವಿಕೆ

ಹಲವು ಮಂದಿ ಸ್ತ್ರೀಯರನ್ನು ಕೆಡಿಸಲಾಯಿತು

ಮರಣಗಳು

82 ಮರಣಗಳಾದವು.

ದಸ್ತಗಿರಿ

1 ದಸ್ತಗಿರಿಯಾಯಿತು.

ಕರ್ನಾಟಕ ಭಾಗ

ಲೂಟಿಗಳು

58 ಗ್ರಾಮಗಳು 29¾ ಲಕ್ಷ ರೂ. 225 ತೊಲ ಭಂಗಾರ 195 ಬಸ್ತಾ ಕಾಳು 250 ತೊಲ ಬೆಳ್ಳಿ 5 ಮನೆಗಳು.

ದಹನಗಳು

ಅನೇಕ ಗೃಹಗಳು ಬಣವೆಗಳು ಮತ್ತು 7 ಗ್ರಾಮಗಳು.

ಕೆಡಿಸುವಿಕೆ

128 ಕ್ಕೆ ಮೇಲ್ಪಟ್ಟು ಸ್ತ್ರೀಯರನ್ನು ಕೆಡಿಸಲಾಯಿತು.

ಮರಣಗಳು

48 ಕ್ಕೆ ಮೇಲ್ಪಟ್ಟು ಮರ್ತ್ಯದವು.

ದಸ್ತಗಿರಿಗಳು

...ಹಕೀಮನು.
...ೀಗಿಗಳನ್ನು ನೆಟ್ಟಗೆ
...ಔಷಧವನ್ನು ಕಣ್ಣು
ಅನೇಕ ಜನರ ಕಣ್ಣು
...ಪೂರ್ಣ ಕಾಣದಂತೆಯೇ
...ದ ಪೋಲೀಸರು ಆ ಹಕೀ
...ಖಾನೆಯನ್ನು ಸೀಲು ಮಾಡಿ
...ಮತ್ತು ಮುಂದಿನ ವಿಚಾರಣೆ
ನಡೆಯಿಸಿದ್ದಾರೆ.

...ಕ್ಕ ಕತ್ತರಿಸಿದ್ದಕ್ಕೆ ಶಿಕ್ಷೆ

...ವದತ್ತಿ ತಾಲ್ಲೂಕ ಪ್ಪೆಕೆ ಗೊರ
...ಳ ಗ್ರಾವ ದಲ್ಲಿಯ ಬಾ ಳಾ ಜಿ
...ಕ್ಷ್ಮಣ ಕುಲಕರ್ಣಿ ಇವರ ಎರಡೂ
ಕರಗಳನ್ನು ನಿಂಗಪ್ಪಾ ಮತ್ತು ಬಸವಂ
ತಾ ಎಂಬೀರ್ವರು ಕಡಿದು ಭಯಂಕರ
ಘಾಯಗೊಳಿಸಿದ್ದು ಅವರೀರ್ವರಮೇಲೆ
ಖಟ್ಲೆ ನಡೆದು ಪ್ರತಿಯೊಬ್ಬರಿಗೆ ಐದು
ವರ್ಷ ಶಿಕ್ಷೆ ವಿಧಿಸಿದರು.

ಹಿಂದೂರಾಜ್ಯ ವೆನ್ನಲು ಸಂಕೋಚ

ನಮ್ಮ ಕಾಂಗ್ರೆಸ್ ಮುಖಂಡರು ಸೂರಕ್ಕೆ ತೊಂಭತ್ತು ಮಂದಿ ಹಿಂದೂ ಗಳಿರುವ ಹಿಂದೂಸ್ಥಾನವನ್ನು ಹಿಂದೂ ರಾಜ್ಯ, ಹಿಂದೂ ಸರಕಾರ ಎಂದು ಹೇಳಲಿಕ್ಕೆ ಸಂಕೋಚ ಪಡುತ್ತಾರೆ.

—ಆದರೆ ಜಿನ್ನ ಸಾಹೇಬರ ಅಣ್ಣ ಚರ್ಚಿಲ್ ಸಾಹೇಬರು ಯಾವಾಗಲೂ "ಸಹ್ಯಾದಿನ ಹಿಂದೂ ಸರಕಾರ" ಎಂದು ಹೇಳಿ ಜಾತೀಯತೆಯ ವಿಷವನ್ನು ಕಾರುತ್ತಲೇ ಇರುತ್ತಾರೆ. ಭೇದನೀತಿಯಲ್ಲಿ ಬ್ರಿಟಿಷರೂ, ಮುಸಲ್ಮಾನರೂ ಹಿಂದೂಗಳಿಂದ ಶ್ರೇಷ್ಠರು.

ಮೈಸೂರು ಸಿಟಿ ರೇಷನಿಂಗ್

ಆಫೀಸರವರ ಕಛೇರಿ ತಾ|| 29–6–1948

ಪ್ರಕಟಣೆ

ಈ ಇಲಾಖಾ ಗೋಡೌನ್‌ಗಳಲ್ಲಿರ ತಕ್ಕ ಸುಮಾರು ಒಟ್ಟು 40,000 ಶಿಥಿಲವಾದ ಮತ್ತು ಅನುಪಯುಕ್ತವಾದ ಖಾಲೀ ಗೋಣೀಚೀಲಗಳನ್ನು ಈ ಕೆಳಗೆ ನಮೂದಿಸಿರುವ ಗೋಡೌನ್‌ಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವುದು. ಈ ಬಗ್ಗೆ ಹೆಚ್ಚಿಗೆ ವಿವರಗಳನ್ನು, ಕೆಲಸದ ದಿನಗಳಲ್ಲಿ ಆಫೀಸಿನಲ್ಲಿ ತಿಳಿಯಬಹುದು.

1) ತಾ|| 19–7–48 ಬೆಳಿಗ್ಗೆ 9 ಗಂಟೆಗೆ ಲಷ್ಕರ್ ಸಬ್ ಗೋಡೌನ್.
2) ತಾ|| 19–7–48 ಮಧ್ಯಾಹ್ನ 3 ಟಿಗೆ ಮಂಡಿ ಸಬ್ ಗೋಡೌನ್.
3) ತಾ|| 20–7–48 ಬೆಳಿಗ್ಗೆ 9 ಟಿಗೆ ಚಾಮರಾಜ ಸಬ್ ಗೋಡೌನ್.
ತಾ|| 20-7-48 ಮಧ್ಯಾಹ್ನ 3

ಪಿ ಸಿ. ಹಾಲ್
ಸಹಾಯಕ ನಿಯಂತ್ರಣಾಧಿಕಾರಿ
ಮೈಸೂರು ಸಿಟಿ

ಏ ನೋ ದ

ರ ಸಾ ಯ ನ ಶಾಸ್ತ್ರೋಪಾಧ್ಯಾಯನು ಬಗೆಬಗೆಗಳ ದ್ರಾವಕಗಳನ್ನು ನೋಡಿಸುತ್ತಾ ಶಿಷ್ಯರಿಗೆ ಪಾಠವನ್ನು ಹೇಳುತ್ತಿರುತ್ತಾನೆ.

ಉ—ಈ ದ್ರಾವಕದಲ್ಲಿ ಈ ರೂಪಾಯಿಯನ್ನು ಹಾಕುತ್ತೇನೆ. ಅದು ಕರಗುಪದೋ ಇಲ್ಲವೋ ?

ಶಿಷ್ಯ—ಕರಗುವುದಿಲ್ಲ ಸರ್ !

ಉ—"ಏನು? ಏಕೆ ಕರಗುವದಿಲ್ಲ?

ಶಿಷ್ಯ—ಕರಗುವ ಹಾಗಿದ್ದಲ್ಲಿ ನೀವು ರೂಪಾಯಿಯನ್ನು ಏಕೆ ಹಾಕುತ್ತಿದ್ದಿರಿ ಸರ್ ?

ಂ ಂ

ವಿಮಲೆಯು ನನ್ನನ್ನು ಮದುವೆಯಾಗುವುದಿಲ್ಲವೆಂದು ಹೇಳಿದ ಕೋಪದಿಂದ ನಾನು ಅವಳ ತಾಯಿಯನ್ನೇ ಮದುವೆ ಮಾಡಿಕೊಂಡೆ. ಈ ಸಂಬಂಧದಿಂದ ವಿಮಲೆಯು ನನ್ನ ಮಗಳಾದಳು ಆದರೆ ನನ್ನ ತಂದೆಯು ವಿಮಲೆಯನ್ನು ಮದುವೆ ಮಾಡಿಕೊಂಡಿದ್ದರಿಂದ ವಿಮಲೆಯು ನನ್ನ ತಾಯಿಯಾದಳು. ನನ್ನ ತಂದೆಯು ನನಿಗೆ ಅಳಿಯನಾದ. ನನ್ನ ಹೆಂಡತಿಯು ನನ್ನ ತಾಯಿಯ ತಾಯಿ ಅಥವಾ ಅಜ್ಜಿಯಾದಳು. ನನ್ನ ಅನುಮಾನವೇನೆಂದರೆ ನನಿಗೆ ನಾನೇ ಅಜ್ಜನಾದೆನೆಂದು.

ಂ ಂ

'ಡಾಕ್ಟರವರೇ !ನನ್ನ ವ್ಯಾಧಿಯು ವಾಸಿಯಾಗಿ ನಾನು ಬದುಕುವೆನೆನ್ನುವಿರಾ ?"

'ಓಯಸ್, ತಪ್ಪದೆ, ಏನನ್ನು ವಿರಾ? ಈ ವ್ಯಾಧಿಯು ಬಂದವರಲ್ಲಿ ಶೇಕಡಾ ಒಬ್ಬನು ಜೀವಂತನಾಗುತ್ತಾನೆ"

"ಅಯ್ಯೋ ! ಹಾಗೆಯೇ"

"ಹಾಗೆ ಭಯಗೊಳ್ಳಬೇಡಿ. ಇದುವರೆಗೂ ನಾನು ಈ ವ್ಯಾಧಿ ಚಿಕಿತ್ಸೆ ಮಾಡಿದ 99 ಮಂದಿಯೂ ಸತ್ತು ಹೋಗಿರುವರು.

ಂ ಂ

"ಏನೋ ? ನೆನ್ನೆ ರಾತ್ರಿ 12 ಗಂಟೆಗಳ ವರೆಗೂ ನೀನೂ ನಿನ್ನ ಹೆಂಡತಿಯೂ ಮಾತನಾಡುತ್ತಿದ್ದಿರಲ್ಲಾ !"

"ಹೋಗೋ ಹುಚ್ಚ ! ನೆನ್ನೆ ರಾತ್ರಿ ನಾನು ಊರಿನಲ್ಲಿಯೇ ಇರಲಿಲ್ಲ"

ಂ ಂ

ಆರ್ಥಿಕ ಮುಗ್ಗಟ್ಟೆಂದರೇನು ?

ನಿಮ್ಮ ಖರ್ಚುಗಳಿಗೆ ಅವಶ್ಯಕವಿರುವದಕ್ಕಿಂತ ಹೆಚ್ಚು ಸಂಬಳವ...

At Opera

ಯಶಸ್ವಿ 8 ನೇ ವಾರ
ಯು. ಆರ್. ಜೀವರತ್ನ, ಎಸ್ ಎಂ. ಕುಮಾರೇಷ್, ಪುಳಿಮೂಟ್ಟೆ
ಸಂತಾನಲಕ್ಷ್ಮಿ ಪಾತ್ರವಹಿಸಿರುವ

ಅ ಭಿ ಮ ನ್ಯು

(ತಮಿಳು)

50 ನೇ ನುದಿನ

50
GALA DA

ಇದರ ಸಂಗಡ ಕೆಲವು ವರ್ಣರ...
ಚಿತ್ರ ಪ್ರದರ್ಶನ ಸಹಾ ಉಂ...
ಪ್ರಥಮೋತ್ಕಾದಶಿ ಪ್ರಯುಕ್ತ ಮ...
ರಾತ್ರಿ ಪ್ರದರ್ಶನವುಂಟು

Morning Shows from 16-7-4
BEDSIDE MANNERS

ಹೊಸ ಬೆಳೆಯ, ಆರಿಸಿ ತೆಗೆದ, ಪರಿಶುದ್ಧವಾದ

ಶ್ರೀ 'ಓಂ' ಗುರುತಿನ ಕೇಸರಿ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾ... ಸ್ಪೇನಿನ ಕೇಸರಿ ಗಿಡಗಳಲ್ಲಿಯು ಹೂಗಳಿಂದ ಆರಿಸಿ ತೆಗೆದುದಾಗಿದ... ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು ಬಹು ಹೊಳಪಿನಿಂ... ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪ... ರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ... ಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥ... ಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿ... 1 ತೋಲಾ, 5 ತೋಲಾ, ಡಬ್ಬಿಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯ... ತ್ತದೆ ಉಪಯೋಗಿಸಬೇಕಾಗಿ ವಿನಂತಿ

ವ ಲ್ಲ ಭ ದಾ ಸ್ ತೇ ಜ್ ಪಾ ಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸ್.

ಸ ತ್ಯ ವಾ ದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಪ್ರ ಬೋ ಧ ಪುಟದಿಂದೊಡಗೂಡಿದ
ಭಾನುವಾರ ಸಂಚಿಕೆ ವಾರ್ಷಿಕ ಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12_0

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the ...tyavadi Press, Chamara ...har, 'Mysore

ಶ ಕ್ತಿ ಸು ಧಾ :

ದೇಹಪುಷ್ಟಿಗೆ
ಮುಖಕಾಂತಿಗೆ
ಶಕ್ತಿ ಸಾಧನೆಗೆ

ಸಂ ಜೀ ವ ನ